1 ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3167

2. ಸದಸ್ಯರ ಹೆಸರು : ಶ್ರೀ. ಅಶೋಕ್. ಆರ್(ಉತ್ತರಹಳ್ಳಿ)

3. ಉತ್ತರಿಸಬೇಕಾದ ಸಚಿವರು : ಶ್ರೀ. ಎಸ್. ಆರ್. ಮೋರೆ. (ಪೌರಾಡಳಿತ ಸಚಿವರು)

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಬೆಂಗಳೂರು ನಗರದ ಸುತ್ತಲಿನ ಏಳು ನಗರ ಸಭೆ ಹಾಗೂ ಒಂದು ಪುರಸಭೆ ವ್ಯಾಪ್ತಿಯಲ್ಲಿ ಕಾವೇರಿ ನೀರು ಪೂರೈಸುವ ಯೋಜನೆ ಪ್ರಸಕ್ತ ಯಾವ ಹಂತದಲ್ಲಿದೆ.	ಬೆಂಗಳೂರು ನಗರದ ಸುತ್ತಮುತ್ತಲಿನ ಏಳು ನಗರಸಭೆ, ಹಾಗೂ ಒಂದು ಪುರಸಭೆಗೆ ಕುಡಿಯುವ ನೀರು ಸರಬರಾಜು ಮಾಡಲು ಸಮಗ್ರ ಯೋಜನೆ ರೂಪಿಸಿದ್ದು, ಈಗ ನೀರು ವಿತರಿಸುವ, ಕೊಳವೆ ಅಳವಡಿಸುವ ಕಾಮಗಾರಿಯ ಟೆಂಡರ್ ಗಳನ್ನು ಕರೆದಿದ್ದು, ಸದರಿ ಟೆಂಡರ್‌ಗಳ ಪ್ರಕ್ರಿಯೆ ಪೂರ್ಣಗೊಂಡಿದ್ದು, ಗುತ್ತಿಗೆದಾರರನ್ನು ನಿಯೋಜಿಸಲಾಗಿದೆ. ಈ ಕಾಮಗಾರಿಗಳು ಏಪ್ರಿಲ್ – ಮೇ 2005ರ ಅವಧಿಯಲ್ಲಿ ಪ್ರಾರಂಭವಾಗಲಿದೆ.
ಆ)	ಈ ಯೋಜನೆಗೆ ತಗಲುವ ವೆಚ್ಚ ಎಷ್ಟು; ಈ ಯೋಜನೆಗೆ ಸಂಗ್ರಹವಾಗಿರುವ ಹಣವೆಷ್ಟು; ಇನ್ನುಳಿದ ಹಣಕ್ಕೆ ಸರ್ಕಾರ ಮಾಡಿರುವ ಯೋಜನೆ ಏನು;	ಈ ಯೋಜನೆಗೆ (ನೀರು ಪೂರೈಕೆ) ತಗಲುವ ಅಂದಾಜು ವೆಚ್ಚ ರೂ. 340.54 ಕೋಟಿಗಳು. ಈ ಮೊತ್ತದಲ್ಲಿ ರೂ. 119.44 ಕೋಟಿಗಳನ್ನು ಬಳಕೆದಾರರಿಂದ ವಂತಿಕೆಯಾಗಿ ಸಂಗ್ರಹಿಸಲು ಉದ್ದೇಶಿಸಲಾಗಿದೆ. ಇದರಲ್ಲಿ ಇದುವರೆವಿಗೆ ರೂ. 32.53 ಕೋಟಿ ಸಂಗ್ರಹವಾಗಿದೆ. ಈ ಯೋಜನೆಗೆ ಬೇಕಾಗುವ ಉಳಿದ ಮೊತ್ತವನ್ನು ಕೆಳಕಂಡಂತೆ ಭರಿಸಲಾಗುವುದು:– 1) ರಾಜ್ಯ ಸರ್ಕಾರದ ಅನುಧಾನ 74.28 ಕೋಟಿ 2) ಬಾಂಡ್ ವಿತರಣೆ 100.00 ಕೋಟಿ 3) ಮೆಗಾಸಿಟಿ ಸಾಲ 46.82 ಕೋಟಿ

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಇ)	ಈ ಯೋಜನೆ ಯಾವಾಗ ಮುಗಿಯುತ್ತದೆ ; ಇದಕ್ಕೆ ಯಾವುದಾದರೂ ಅಡ್ಡಿ ಆತಂಕಗಳಿವಿಯೆ ; (ವಿವರಿಸುವುದು)?	ಈ ಯೋಜನೆಯನ್ನು ಸೆಪ್ಟೆಂಬರ್ 2006 ನೇ ಅಂತ್ಯದೊಳಗೆ ಸಂಪೂರ್ಣವಾಗಿ ಪೂರ್ಣಗೊಳಿಸಲಾಗುವುದು. ಸದರಿ ಯೋಜನೆಗೆ ಸದ್ಯಕ್ಕೆ ಯಾವುದೇ ಅಡ್ಡಿ ಆತಂಕಗಳಿರುವುದಿಲ್ಲ.

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಸುತ್ತಮುತ್ತಲಿನ ಏಳು ನಗರಸಭೆಗೆ ಸುಮಾರು 25 ಲಕ್ಷ ಜನರು ವಾಸ ಮಾಡತಕ್ಕಂಥ ಬಡಾವಣೆಗಳಿಗೆ ಕಾವೇರಿ ನೀರನ್ನು ಕೊಡುತ್ತೇವೆಂದು ಹಿಂದಿನ ಸರ್ಕಾರ ತಮ್ಮ ಬಜೆಟ್ ಮುಖಾಂತರ ತಿಳಿಸಿತ್ತು. ಇದು ಆದ ಮೇಲೆ ದಿ: 1.1.2004 ರಲ್ಲಿ ಒಂದು ಟೆಂಡರ್ ಅನ್ನು ಸಹ "ವಿಜಯ ಟೈಮ್ಸ್‌ನಲ್ಲಿ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್"ನಲ್ಲಿ ಕರೆದಿದ್ದರು. ಅದನ್ನು ಕ್ಯಾನ್ಸಲ್ ಮಾಡಿತ್ತು. ಈಗ ಮತ್ತೆ ಟೆಂಡರ್ ಅನ್ನು ಕರೆದಿದ್ದು, ಬಹಳ ಸಂತೋಷ. ತಾವು ಈ ಟೆಂಡರ್ ಅನ್ನು ಕ್ಯಾನ್ಸಲ್ ಮಾಡುವುದಿಲ್ಲವೆಂದು ಅಥವಾ ಇದು ನಡೆಸುತ್ತಿರಾ ? ಎಂಬುದು ಪ್ರಶ್ನೆ. ಅದೇ ರೀತಿಯಲ್ಲಿ ಪ್ರತಿ ನೀರಿನ ಬಳಕೆದಾರರು ಯಾರಿದ್ದಾರೆ. ಅವರು ಏಳೂವರೆ ಸಾವಿರ ರೂಪಾಯಿಗಳನ್ನು ಕಟ್ಟಬೇಕೆಂದು ಕಳೆದ ಬಾರಿ ಆದೇಶವನ್ನು ಮಾಡಿದ್ದರು. ಈಗ ಅದನ್ನು ಹತ್ತು ಸಾವಿರ ರೂಪಾಯಿಗಳನ್ನು ಮಾಡಿದ್ದೀರಿ. ಇದನ್ನು ಕಡಿಮೆ ಮಾಡಬೇಕೆಂಬುದು ನನ್ನ ಆಗ್ರಹವಾಗಿದೆ. ಇದನ್ನು ಎಷ್ಟು ಮಾಡುತ್ತೀರೆಂಬ ಬಗ್ಗೆ ಉತ್ತರದಲ್ಲಿ ತಿಳಿಸಿಲ್ಲ. ತಾವು ಉತ್ತರದಲ್ಲಿ 119.44 ಕೋಟಿ ರೂಪಾಯಿಗಳನ್ನು ಬಳಕೆದಾರರು ಕಟ್ಟಬೇಕೆಂದು ತಿಳಿಸಿದ್ದೀರಿ. ಈಗಾಗಲೇ ನಗರ ಸಭೆಗಳು ಬಹಳ ಅಧ್ವಾನದ ಸ್ಥಿತಿಯಲ್ಲಿ ಇದೆ. ಇದು ಬೆಟರ್‌ಮೆಂಟ್ ಚಾರ್ಜನ್ನು ಕಟ್ಟುವುದಕ್ಕೆ ಹಣವಿಲ್ಲ. ಇಲ್ಲಿ ಬಳಕೆದಾರರು ಯಾವಾಗ ಕಟ್ಟಬೇಕು ? ಇವರು ನೀರಿನ ಕನೆಕ್ಷನ್ ತೆಗೆದುಕೊಳ್ಳುವಾಗ ಕಟ್ಟಬೇಕಾ, ಅಥವಾ ಮೊದಲೇ ಕಟ್ಟಬೇಕಾ ? ಇದನ್ನು ತಾವು ತಿಳಿಸಬೇಕೆಂದು ನಾನು ತಮ್ಮನ್ನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಮೋರೆ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಯು. ಜಿ. ಡಿ.ಯ 340 ಕೋಟಿ ರೂಪಾಯಿಗಳ ಯೋಜನೆಯಾಗಿದೆ. ಅದನ್ನು ನಾವು ವರ್ಲ್ಡ್ ಬ್ಯಾಂಕ್‌ಗೆ ಕಳುಹಿಸುತ್ತೇವೆ. ಅದು ಶೀಘ್ರದಲ್ಲೆ ಬರುತ್ತದೆ. ಇನ್ನು ಡಿಸ್ಟ್ರಿಬ್ಯೂಷನ್ ಬಗ್ಗೆ ಟೆಂಡರ್

ಆಗಿ ಅವಾರ್ಡ್ ಕೊಟ್ಟಿದ್ದೇವೆ. ಆದಷ್ಟು ಬೇಗ ಕೆಲಸ ಆರಂಭವಾಗುತ್ತದೆ. ಇನ್ನು ಬಳಕೆದಾರರ ವಂತಿಕೆಯ ಬಗ್ಗೆ ಕೇಳಿದ್ದೀರಿ. ತಾವು ಬಹಳ ಉತ್ತಮವಾದಂತಹ ಪ್ರಶ್ನೆಯನ್ನು ಕೇಳಿದ್ದೀರಿ. ನಾವು ಬಳಕೆದಾರರಿಗೆ ಇಷ್ಟು ದಿನದ ಒಂದೇ ಯೂನಿಫಾರಂ ರೇಟನ್ನು ಹಾಕಿ ಹಿಂದೆ ವಸೂಲಿ ಮಾಡಿದ್ದೇವೆ. ಅದು ಏನು ಹೆಚ್ಚು ಆಗುವುದಿಲ್ಲ. ಇದು ಸುಮಾರು 32 ಕೋಟಿ ರೂಪಾಯಿಗಳು ಆಗಿದೆ. ನಾವು 119 ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದೇವೆ. ಆದರೆ ನಮ್ಮ ಸರ್ಕಾರಕ್ಕೆ ಇಲ್ಲಿ ಗಮನಕ್ಕೆ ಬಂದದ್ದು, ಅಲ್ಲಿ ಬಡವರು ಸೈಟುಗಳನ್ನು ತೆಗೆದುಕೊಂಡಿದ್ದಾರೆ, ಮಧ್ಯಮ ವರ್ಗದ ವರು ತೆಗೆದುಕೊಂಡಿದ್ದಾರೆ. ಸಾಹುಕಾರರು ಸೈಟುಗಳನ್ನು ತೆಗೆದುಕೊಂಡಿದ್ದಾರೆ. ಈ ರೀತಿಯಾಗಬಾರದೆಂದು ಹೇಳಿ, ಸೈಟಿನ ಡೈಮೆನ್‌ಷನ್ ಎಷ್ಟಿದೆ, ಆ ಆಧಾರದ ಮೇಲೆ, ಬಳಕೆದಾರರ ವಂತಿಕೆಯನ್ನು ಹಾಕಬೇಕೆಂದು ಸರ್ಕಾರ ರಿವೈಜ್ ಮಾಡುತ್ತಿದೆ. ನಾವು ಇದನ್ನು ಮಾಡಿ ಬೇಗ ಕಳುಹಿಸುತ್ತೇವೆ. ಇದು ಆದ ಮೇಲೆ ಬಳಕೆದಾರರಿಂದ ಆ ಹಣವನ್ನು ವಸೂಲಿ ಮಾಡುತ್ತೇವೆ. ಇದನ್ನು ಮುಂಗಡವಾಗಿ ಕೊಡಬೇಕಾಗುತ್ತದೆ.

ಶ್ರೀ. ಆರ್. ಅಶೋಕ್ : ತಾವು ಈಗಾಗಲೇ 10 ಸಾವಿರ ರೂಪಾಯಿಗಳನ್ನು ಕಲೆಕ್ಟ್ ಮಾಡಿಬಿಟ್ಟಿದ್ದೀರಿ. ನಗರ ಸಭೆಗಳಲ್ಲಿ ಕಲೆಕ್ಟ್ ಮಾಡಿದ್ದೀರಾ, ಯಾರು ಬಳಕೆದಾರರು ಇದ್ದಾರೆ, ಅವರಿಂದ ಮಾಡಿದ್ದಾರೆ. ನೀವು ಈಗ ಹೊಸದಾಗಿ ಸ್ಕೇಲ್ ಮಾಡುತ್ತೇವೆ. ಅದು ಸೈಟ್ ಡೈಮೆನ್‌ಷನ್ ಮೇಲೆ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಈಗ 10 ಸಾವಿರ ರೂಪಾಯಿಗಳನ್ನು ಕಟ್ಟಿರುವವರ ಗತಿ ಏನು ? ಇಲ್ಲಿ ಬಡವರು 10 ಸಾವಿರ ರೂಪಾಯಿಗಳನ್ನು ಕಟ್ಟಿದ್ದಾರೆ.

ಶ್ರೀ ಎಸ್. ಆರ್. ಮೋರೆ : ಇಲ್ಲಿ ಜಾಸ್ತಿಯಾದರೆ ಅಡ್ಜಟ್ ಮಾಡಿ ಕೊಡಬೇಕಾಗುತ್ತದೆ, ಎಕ್ಸಸ್ ಆದರೆ ನಾವು ವಾಪಸ್ಸು ಕೊಡಬೇಕಾಗುತ್ತದೆ.

ಶ್ರೀ ಆರ್.ಅಶೋಕ್ : ತಾವು ಹಿಂದೆ ಏಳು ಸಾವಿರ ರೂಪಾಯಿಗಳು 20 – 40 ಅಡಿ ಸೈಟು ಇರುವವರಿಗೆ, 30–40 ಅಡಿ ಸೈಟು ಇರುವವರಿಗೆ 10 ಸಾವಿರ ರೂಪಾಯಿಗಳು, 40 – 60 ಅಡಿ ಸೈಟು ಇರುವವರಿಗೆ ಬೇರೆ ಬೇರೆ ಈ ರೀತಿಯ ರೇಂಜ್‌ನಲ್ಲಿ ಹೇಳಿದ್ದೀರಾ, ಈಗ ಎಲ್ಲರ ಹತ್ತಿರ ಈಕ್ವಲ್ ಆಗಿ ಕಲೆಕ್ಟ್ ಮಾಡಬೇಕೆಂದು 10 ಸಾವಿರ ರೂಪಾಯಿಗಳನ್ನು ಮಾಡಿದ್ದೀರಿ. ಈಗ ಬಡವರು 7 ಸಾವಿರ ರೂಪಾಯಿಗಳನ್ನು ಕಟ್ಟಬೇಕಾಗಿರುವವರು 10 ಸಾವಿರ ರೂಪಾಯಿಗಳನ್ನು ಕಟ್ಟಿದ್ದಾರೆ. ಅವರಿಗೆ ಏನು ಮಾಡುತ್ತೀರಿ ?

ಶ್ರೀ ಎಸ್. ಆರ್. ಮೋರೆ : ಅವರು ಜಾಸ್ತಿ ಹಣವನ್ನು ಕಟ್ಟಿದ್ದರೆ ವಾಪಸ್ಸು ಕೊಡಬೇಕಾಗುತ್ತದೆ. ಆಗ ಯೂನಿಫಾರಂ ಸೈಟ್ ಇತ್ತು, ಆಗ ಅವರು ಹಣವನ್ನು

ಕಟ್ಟಿದ್ದರು. ಈಗ ನಾವು ರಿವೈಜ್ ಮಾಡಿದ ಮೇಲೆ, ಅವರಿಗೂ ಕೂಡ ರಿವೈಜ್ ರೇಟನ್ನು ಹಾಕುತ್ತೇವೆ.

ಶ್ರೀ ಆರ್. ಅಶೋಕ್: ತಾವು ದಯವಿಟ್ಟು ಇದರ ಬಗ್ಗೆ ಈಗಾಗಲೇ ಈ ಪ್ರಾಜೆಕ್ಟ್ ಸ್ಟಾರ್ಟ್ ಆಗಬೇಕಾಗಿತ್ತು. ನಾನು ಪ್ರತಿ ದಿವಸ ಹೇಳುತ್ತಿದ್ದೇನೆ. ಈಗಾಗಲೇ 7 ನಗರ ಸಭೆಗಳಲ್ಲಿ ಎಂಟು ಸಾವಿರ ಬೋರ್‌ವೆಲ್‌ಗಳು ಇವೆ. ಇಲ್ಲಿ ನೂರು ಅಡಿಗೆ ಒಂದೊಂದು ಬೋರ್‌ವೆಲ್‌ಗಳನ್ನು ಕೊರೆದಿದ್ದಾರೆ.

ಈ ವರ್ಷ ಬೇಸಿಗೆಯಲ್ಲಿ ಸುಮಾರು 200–300 ಬೋರ್‌ವೆಲ್‌ಗಳನ್ನು ಕೊರೆಯುವಂತಹ ವ್ಯವಸ್ಥೆ ನಗರಸಭೆಯಲ್ಲಿ ಆಗುತ್ತಿದೆ. ಇಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಸುಮಾರು 30–40 ಕೋಟಿ ರೂಪಾಯಿಗಳು ಬೋರ್‌ವೆಲ್‌ಗೆ ಇಂಟೆಂಟ್ ಇರುವುದರಿಂದ, ತಾವು ಪ್ರಾಜೆಕ್ಟ್ ಅನ್ನು ಮುಂದಿನ ತಿಂಗಳು ಲಾಂಚ್ ಮಾಡುತ್ತೇನೆಂದು ಹೇಳಿದ್ದಿರಾ, ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಿರಾ, ತಾವು ಇದನ್ನು ಯಾವಾಗ ಪ್ರಾರಂಭ ಮಾಡುವಂಥಾದ್ದು ಯಾವ ದಿನಾಂಕದಲ್ಲಿ ಮಾಡುತ್ತಿರೆಂಬ ಬಗ್ಗೆ ತಿಳಿಸಬೇಕು.

ಶ್ರೀ ಎಸ್. ಆರ್. ಮೋರೆ: ಪ್ರಾರಂಭ ಮಾಡುತ್ತೇವೆ. ನಾವು ಟೆಂಡರ್ ಅನ್ನು ಕರೆದಿದ್ದೆವಲ್ಲಾ ಇನು 2–3 ದಿನಗಳಲ್ಲಿ ವರ್ಕ್ ಆರ್ಡರ್ ಇಷ್ಯೂ ಆಗುತ್ತದೆ. ಆಗ ಕೆಲಸವೂ ಪ್ರಾರಂಭವಾಗುತ್ತದೆ.

ಶ್ರೀ ಆರ್. ಅಶೋಕ್: ತಾವು ಇನ್ನು ಎರಡು, ಮೂರು ದಿವಸಗಳಲ್ಲಿ ಕೆಲಸ ಪ್ರಾರಂಭ ಮಾಡುತ್ತೀರಾ ? ಬಹಳ ಸಂತೋಷ.

ಅಧ್ಯಕ್ಷರು : ಶ್ರೀ ಕ್ಯಾತಸಂದ್ರ ಎಸ್. ರಾಜಣ್ಣನವರೇ, ನಿಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ. ಅದುದರಿಂದ ನಿಮಗೆ ಮುಂದಿನ ಸಾರಿ ಉತ್ತರ ಕೊಡಿಸುತ್ತೇನೆ.

ಶ್ರೀ ಕ್ಯಾತಸಂದ್ರ ಎಸ್.ರಾಜಣ್ಣ: ಮಾನ್ಯ ಅಧ್ಯಕ್ಷರೇ, ತಾವು ಪ್ರಶ್ನೆಯನ್ನು ನೋಡಿದರೆ ಗೊತ್ತಾಗುತ್ತದೆ. ನಾನು ಬಹಳ ಸುಲಭವಾದ ಪ್ರಶ್ನೆಯನ್ನು ಕೇಳಿದ್ದೇನೆ. ಅದನ್ನು ಏನು ತಿರುಗಿಸಿ, ಹಿಂದೆ ಮುಂದೆ ಮಾಡಿ ಏನು ಕೇಳಿಲ್ಲ. ನಾನು ಬಹಳ ಸುಲಭವಾದ ಪ್ರಶ್ನೆಯನ್ನು ಹಾಕಿದ್ದೇನೆ. ನಾವು ಸಮಯಕ್ಕೆ ಸರಿಯಾಗಿ ಪ್ರಶ್ನೆಯನ್ನು ಹಾಕಿದರೂ ಉತ್ತರ ಬರಲಿಲ್ಲವೆಂದರೆ, ನನಗೆ ಇದು ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ತಮಗೆ ಉತ್ತರವನ್ನು ಕೊಡಿಸುತ್ತೇನೆ. ಈಗ ಸದನದಲ್ಲಿ ಮಾನ್ಯ ಜಲಸಂಪನ್ಮೂಲ ಸಚಿವರು ಇದ್ದಾರೆ. ಮಾನ್ಯ ಮಲ್ಲಿ ಕಾರ್ಜುನ ಖರ್ಗೆಯರವರೇ, ಮಾನ್ಯ ಕ್ಯಾತಸಂದ್ರ ಎಸ್. ರಾಜಣ್ಣನವರ ಪ್ರಶ್ನೆಗೆ ಉತ್ತರ ಬಂದಿಲ್ಲ.